ಮೈಸೂರು ನಗರದಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ

೬೧ ಶ್ರೀಮತಿ ಮುಕ್ತಾರುನ್ನಿಸಾ (ನರಸಿಂಹರಾಜ್).—ಪೌನ್ಯ ಲೋಕೋಪಯೋಗಿ ಹಾಗೂ ಜಲಾನಯನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರಿನಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಯಾವಾಗಿನಿಂದ ದುರಸ್ತಿ ಕೆಲಸಗಳನ್ನು ಮಾಡಿಸಿಲ್ಲ, ಮತ್ತು ದುರಸ್ತಿ ಕೆಲಸ ಮಾಡಿಸಿಲ್ಲದ ಕಟ್ಟಡಗಳ ಸಂಖ್ಯೆ ಎಷ್ಟು ?

ಆ) I) ಹಾಗಿದ್ದಲ್ಲಿ ಯಾವ ಕಾರ್ಯಕ್ರಮದಂತೆ (ಪ್ರೋಗ್ರಾಂ) ಸರ್ಕಾರದಿಂದ ಈ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಿಸಲಾಗುವುದು ? ಮತ್ತು

II) ಅನುದಾನ ಹೊಂದಿಸಲಾಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಮೈಸೂರು ನಗರದ ಸರ್ಕಾರಿ ಶಾಲಾ ಕಟ್ಟಡಗಳಿಗೆ ಪ್ರತಿ ವರ್ಷವೂ ದುರಸ್ತಿ ಕೆಲಸಗಳನ್ನು ಮಾಡಿಸಲಾಗುತ್ತಿದೆ.

ಆ) I) ಪ್ರತಿ ವರ್ಷವೂ ವಾರ್ಷಿಕ ದುರಸ್ತಿ ಕೆಲಸಗಳು, ಮತ್ತು ವಿಶೇಷ ದುರಸ್ತಿ ಕೆಲಸಗಳು ಇವುಗಳನ್ನು ನಿಯಮಾನುಸಾರ ಮಾಡಿಸಲಾಗುತ್ತಿದೆ.

II) ಹೊಂದಿಸಲಾಗಿದೆ.

SMT. MUKTHARUNNISA.—Sir, I would like to bring to the notice of the Government that only few school buildings at Mysore City are repaired every year–that is what the answer says. But I had asked about the number of schools that have not been repaired by the Department in Mysore City–there is no answer for this question.

Secondly, to my question (b) it is said that the repairs are attended under "Annual Repairs and "Special repairs "programme. Here I would like to mention that there are many old buildings like Idiga schools which are centrally situated and all have not been repaired Some of the Officers of the Department, some time back at Mysore said that which are the buildings we have to repair ?–that is the position. They have no information about the buildings to be repaired. I would like to know whether this fact has come to the notice of the Government as to how many schools which have got to be repaired or so far repaired.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯೆಯವರು ಕೇಳಿರತಕ್ಕ (ಅ) ಪ್ರಶ್ನೆಗೆ "ಮೈಸೂರು ನಗರದ ಸರ್ಕಾರಿ ಶಾಲಾ ಕಟ್ಟಡಗಳಿಗೆ ಪ್ರತಿ ವರ್ಷವೂ ದುರಸ್ತಿ ಕೆಲಸಗಳನ್ನು ಮಾಡಿಸಲಾಗುತ್ತಿದೆ" ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ ನಮ್ಮ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ ಕಟ್ಟಡಗಳು ಮೈಸೂರಿನಲ್ಲಿ ೩೦ ಇವೆ. ಇವು ೧೯೩೦ನೇ ಇಸವಿಯಿಂದ ೧೯೭೦ನೇ ಇಸವಿಯ ಅವಧಿಯೊಳಗೆ ಕಟ್ಟಿರತಕ್ಕವು. ಇವುಗಳ ದುರಸ್ತಿಕಾರ್ಯಕ್ಕಾಗಿ ಪ್ರತಿ ವರ್ಷ ೩ ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೇವೆ ಸ್ಪೆಷಲ್ ಬಿಲ್ಡಿಂಗ್ಸ್ (ಎಜುಕೇಷನ್) ೨೫೯ ಹೆಡ್‌ನಲ್ಲಿ ೮೩–೮೪ನೇ ಸಾಲಿನಲ್ಲಿ ೩.೦೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ೮೪–೮೫ನೇ ಸಾಲಿನಲ್ಲಿ ೨.೯೯ ಲಕ್ಷ ರೂಪಾಯಿಗಳು ಖರ್ಚುಮಾಡಿದ್ದೇವೆ. ಈ ವರ್ಷ ೭೫ ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ಇದು ಇರತಕ್ಕ ಪರಿಸ್ಥಿತಿ. ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ ಈ ೩೦ ಕಟ್ಟಡಗಳ ಪೈಕಿ ತುಂಬಾ ಡೆಲಾಪಿಡೇಟೆಡ್ ಸ್ಥಿತಿಯಲ್ಲಿರತಕ್ಕ ಕಟ್ಟಡಗಳು ಯಾವುದಾದರೂ ಇದ್ದರೆ

ಅದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತವಾಗಿಯೂ ಅಂಥಾದನ್ನು ರಿಪೇರಿ ಮಾಡಿಸಿಕೊಡಲು ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ವೃದ್ಧಾಪ್ಯ ವೇತನ ನೀಡಂವ ಕುರಿತಂ

೩೪೫. ಶ್ರೀ ಎಂ.ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವೃದ್ಧಾಪ್ಯ ವೇತನ ಪಡೆಯುವವರ ಸಂಖ್ಯೆ ಎಷ್ಟು ?
(ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

ಆ) ಸರ್ಕಾರದವರು ವೃದ್ಧಾಪ್ಯ ವೇತನ ಮಂಜೂರು ಮಾಡುವಾಗ ಅಳವಡಿಸಿಕೊಂಡಿರುವ (ಕಾನೂನಿನ ನಿಯಮಗಳೇನು) ಅಳತೆಗೋಲೇನು ?

ಇ) ವೃದ್ಯಾಪ್ಯ ವೇತನ ಮಂಜೂರು ಮಾಡುವಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು)

ಅ) ರಾಜ್ಯದಲ್ಲಿ ೫,೩೧,೦೫೦ ವೇತನಿಗಳು ವೃದ್ಧಾಪ್ಯ ವೇತನ ಪಡೆಯುತ್ತಿರುವರು.

(ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಪಟ್ಟಿಯನ್ನು ಲಗತ್ತಿಸಿದೆ)

ಆ) ಸರ್ಕಾರವು ವೃದ್ಧಾಪ್ಯ ವೇತನ ಮಂಜೂರು ಮಾಡುವಾಗ ಈ ಕೆಳಕಂಡ ನಿಯಮಗಳನ್ನು ಅಳವಡಿಸಿಕೊಂಡಿದೆ.

೧. ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸುವವರು ನಿರ್ಗತಿಕರಾಗಿದ್ದು ೬೫ ವರ್ಷ ಮತ್ತು ಇನ್ನೂ ಹೆಚ್ಚಿನ ವಯಸ್ಸಿನವರಾಗಿರಬೇಕು. ಕುಷ್ಠರೋಗ ಮಾನಸಿಕ ಅಸ್ವಾಸ್ಥ್ಯ, ಕ್ಷಯ ಅಸ್ತಮ, ಮುಂತಾದ ವ್ಯಾಧಿಗಳಿಂದ ದುಡಿಯಲಂ ಅಸಮರ್ಥರೆನಿಸಿದ್ದಂತವರಿಗೆ ೬೦ ವರ್ಷಗಳಾಗಿರಬೇಕು ಇಂತಹವರು ಸ್ಥಾನೀಯ ವೈದ್ಯಾಧಿಕಾರಿಯಿಂದ ಪ್ರಮಾಣ ಪತ್ರ ಒದಗಿಸಬೇಕು.

೨. ಕುರುಡು ಹೆಳವು, ಇಂತವುಗಳಿಂದ ದುಡಿಯಲು ಅಸಮರ್ಥರಾಗಿದ್ದು ನಿರ್ಗತಿಕರಾಗಿದ್ದವರಿಗೆ ಕನಿಷ್ಠ ವಯೋಮಿತಿ ೪೫ ವರ್ಷಗಳು.

೩. ವೃದ್ಧಾಪ್ಯ ವೇತನ ಪಡೆಯುವ ನಿರ್ಗತಿಕರಿಗೆ ಯಾವುದೇ ಆದಾಯದ ಮೂಲವಿರಬಾರದು.

೪. ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸುವವರು, ಅರ್ಜಿ ಸಲ್ಲಿಸುವ ವೇಳೆಗೆ ಕನಿಷ್ಠ ೩ ವರ್ಷ ಮೊದಲೇ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.

೫. ಮಾನಸಿಕವಾಗಿ ಸ್ವಸ್ಥ ವಿಲ್ಲದ ನಿರ್ಗತಿಕರ ಪರವಾಗಿ ಅವರ ಪೋಷಕರು ಸಲಹುವ ಬಗ್ಗೆ ಖಾತರಿ ನೀಡಿದರೆ ಆ ಪೋಷಕರಿಗೆ ವೃದ್ಧಾಪ್ಯ ವೇತನ ಸಲ್ಲುತ್ತದೆ.

ಇ) ಬಂದಿದೆ.

ಈ) ಅಂತಹವರುಗಳ ವೃದ್ಧಾಪ್ಯ ವೇತನವನ್ನು ನಿಲ್ಲಿಸಲಾಗಿದೆ